# ಶರಣಾಗತಿ – ಅದೊಂದೇ ಗತಿ

## (ಗೃಹಸ್ಥ ಜೀವನದಲ್ಲಿ ಶರಣಾಗತಿಯ ಮಹತ್ವ)



**ಸ್ವಾಮಿ ನಿತ್ಯಸ್ಥಾನಂದ**

ಸಂಸಾರದಲ್ಲಿದ್ದೂ ಭಗವಂತನ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವವರಿಗೆ ಅತ್ಯುತ್ತಮ ಸಾಧನವೇ ಶರಣಾಗತಿ. ಹಲವು ಸಂದಿಗ್ಧ ಪರಿಸ್ಥಿತಿಗಳಲ್ಲಿ ದೇವರಲ್ಲಿ ಶರಣಾಗುವುದೊಂದೇ ಭಕ್ತನಿಗೆ ಉಳಿದಿರುವ ಮಾರ್ಗ. ಅಂತೆಯೇ ಸದಾ ಶರಣಾಗತಿಯ ಭಾವದಲ್ಲಿರುವುದು ಗೃಹಸ್ಥರನ್ನು ಮುಕ್ತಿಯೆಡೆಗೆ ಕೊಂಡೊಯ್ಯುವುದು. ಈ ವಿಷಯವನ್ನು ವಿಶದವಾಗಿ ವಿವರಿಸಿರುವ ಲೇಖಕರು 'ವಿವೇಕಪ್ರಭ'ದ ಮೊದಲನೆಯ ಸಂಪಾದಕರಾಗಿದ್ದರು; ಹಾಗೂ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಪ್ರವಚನಕಾರರೂ, ಬರಹಗಾರರೂ, ಉತ್ತಮ ಚಿಂತಕರೂ ಆಗಿರುವ ಪೂಜ್ಯ ಸ್ವಾಮೀಜಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ದಾವಣಗೆರೆ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

ಆಧ್ಯಾತ್ಮಿಕ ಜೀವನವೆಂದರೆ ಆತ್ಯಂತಿಕವಾಗಿ ನಮ್ಮ ಅಹಂಕಾರದ ನಾಶ-ನಮ್ಮ ವೈಯಕ್ತಿಕ ಭಾವವನ್ನು ತೊರೆದು ಭಗವದ್ಭಾವದಲ್ಲಿ ಒಂದಾಗುವುದು. ಎಲ್ಲ ಯೋಗಗಳ ಗುರಿಯೂ ಇದೇ ಆಗಿದೆ. ಮಡಕೆಯೊಳಗಿರುವ ಆಕಾಶವು ಹೊರಗಿನ ಆಕಾಶದಿಂದ ಪ್ರತ್ಯೇಕವಾಗಿರುವಂತೆ ಕಂಡುಬರುತ್ತದೆ. ಮಡಕೆಯು ಒಡೆದು ಹೋದರೆ ಒಳಗಿರುವ ಆಕಾಶವು ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡು ಹೊರಗಿರುವ ಸರ್ವವ್ಯಾಪಿ ಆಕಾಶದೊಂದಿಗೆ ಒಂದಾಗುತ್ತದೆ. ಹಾಗೆಯೇ ದೇಹೇಂದ್ರಿಯಮನಸ್ಸುಗಳ ಉಪಾಧಿಯ ದೆಸೆಯಿಂದ ನಮಗೊಂದು ಪ್ರತ್ಯೇಕ ಅಸ್ತಿತ್ವವಿದೆ ಎಂದು ಅನಿಸುತ್ತದೆ. ಇದೇ ಅಹಂಭಾವಕ್ಕೆ ಕಾರಣ. ನಾವು ದೇಹೇಂದ್ರಿಯ ಮನಸ್ಸುಗಳನ್ನು ಮೀರಿ ಹೋದಾಗ ಈ ಅಹಂಭಾವವು ಹೊರಟು ಹೋಗಿ ಭಗವದ್ಭಾವವೊಂದೇ ಉಳಿಯುತ್ತದೆ.

ಜ್ಞಾನಯೋಗಿಯು ತನ್ನ ಅಹಂಕಾರವನ್ನು ವಿಸ್ತರಿಸುತ್ತ ಹೋಗಿ ಅದನ್ನು ವಿಶ್ವೀಕರಿಸುತ್ತಾನೆ; ಹೀಗೆ ತನ್ನ ಅಹಂಕಾರವನ್ನು ಕಳೆದುಕೊಳ್ಳುತ್ತಾನೆ. ಕರ್ಮಯೋಗಿಯು ಅನಾಸಕ್ತಭಾವದಿಂದ ಕರ್ಮವನ್ನು ಮಾಡುತ್ತ, ಕರ್ತೃತ್ವ, ಭೋಕ್ತೃತ್ವಭಾವವನ್ನು ತೊರೆದು ತನ್ನ ಅಹಂಕಾರವನ್ನು ವಿಶ್ವ ಅಹಂನೊಂದಿಗೆ ಒಂದಾಗಿಸುತ್ತಾನೆ. ರಾಜಯೋಗಿಯು ತನ್ನ ಎಲ್ಲ ಚಿತ್ತವೃತ್ತಿಗಳನ್ನು ನಿಗ್ರಹಿಸುವುದರ ಮೂಲಕ-ಚಿತ್ತವೃತ್ತಿಗಳ ಮೊತ್ತವೇ ಅಹಂ ಆಗಿರುವುದರಿಂದ – ತನ್ನ ಅಹಂಕಾರವನ್ನು ಹೋಗಲಾಡಿಸುತ್ತಾನೆ. ಭಕ್ತಿಯೋಗಿಯು ಭಗವಂತನಿಗೆ ಪೂರ್ಣ ಶರಣಾಗುವುದರ ಮೂಲಕ ತನ್ನ ಅಹಂಕಾರವನ್ನು ಅಳಿಸಿಹಾಕುತ್ತಾನೆ.

ಶಾಸ್ತ್ರದಲ್ಲಿ ಶರಣಾಗತಿಯ ಆರು ಲಕ್ಷಣಗಳನ್ನು ಹೇಳಲಾಗಿದೆ:

**ಆನುಕೂಲ್ಯಸ್ಯ ಸಂಧಾನಂ ಪ್ರಾತಿಕೂಲ್ಯಸ್ಯ ವರ್ಜನಂ**
**ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವವರಣಂ ತಥಾ ।**
**ಆತ್ಮನಿಕ್ಷೇಪಕಾರ್ಪಣ್ಯೇ ಷಡೇತೇ ಶರಣಾಗತಿಃ ॥**

### ೧. ಆನುಕೂಲ್ಯಸ್ಯ ಸಂಧಾನಂ

ನಮ್ಮ ಆಧ್ಯಾತ್ಮಿಕ ಆದರ್ಶಕ್ಕೆ, ಸಾಧನೆಗೆ ಅನುಕೂಲವೂ ಪೂರಕವೂ ಪ್ರೇರಕವೂ ಆದವುಗಳನ್ನು ಹೊಂದಲು ಹಾಗೂ ಅನುಸರಿಸಲು ನಾವು ಮುಂದಾಗಬೇಕು. ಉದಾಹರಣೆಗೆ ಸಾಧುಸಂಗ ಅಥವಾ ಸತ್ಸಂಗ ಮುಂತಾದವುಗಳು. ಶ್ರೀರಾಮಕೃಷ್ಣರು ಸಾಧುಸಂಗಕ್ಕೆ ಹೆಚ್ಚು ಒತ್ತನ್ನು ನೀಡುತ್ತಿದ್ದರು. ಅವರು ಹೇಳುತ್ತಾರೆ: ''ಸತ್ಸಂಗ, ಎಂದರೆ ಭಗವದ್ಭಕ್ತರ ಸಾಧುಸತ್ಪುರುಷರ ಸಹವಾಸ ಆಗಾಗ ಮಾಡುತ್ತಿರಬೇಕು. ಮನಸ್ಸು ಹಗಲಿರುಳೂ ಸಂಸಾರದಲ್ಲೇ, ಪ್ರಾಪಂಚಿಕ ಕೆಲಸಕಾರ್ಯಗಳಲ್ಲೇ ನಿರತವಾಗಿಬಿಟ್ಟದ್ದರೆ ಅದು ಭಗವನ್ಮುಖವಾಗಲಾರದು.'' *(ಶ್ರೀರಾಮಕೃಷ್ಣ ವಚನವೇದ ಭಾಗ ೧, ಪು.೭)* ಸಾಧುಸಂಗದಿಂದ ಭಗವದ್‌ವ್ಯಾಕುಲತೆಯೂ ವೈರಾಗ್ಯವೂ ಉಂಟಾಗುವುದೆಂದು ಅವರು ಹೇಳುತ್ತಿದ್ದರು. ಹಾಗೆಯೇ ಸದ್‌ಗ್ರಂಥ, ಶಾಸ್ತ್ರಗ್ರಂಥಗಳ ಅಧ್ಯಯನವೂ ಆಧ್ಯಾತ್ಮಿಕ ಆದರ್ಶವನ್ನು ಉಳಿಸಿಕೊಂಡು ಬೆಳಸಿಕೊಂಡು ಹೋಗುವುದಕ್ಕೆ ಪೂರಕವೂ ಪ್ರೇರಕವೂ ಆದುದು. ಭೌತಿಕವಾಗಿಯೂ ನೈತಿಕವಾಗಿಯೂ ಶಿಸ್ತುಬದ್ಧ ಜೀವನವನ್ನು ನಡೆಸುವುದು ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಅನುಕೂಲವಾಗುತ್ತದೆ. ಎಲ್ಲ ವಿಷಯಗಳಲ್ಲಿಯೂ ಅಚ್ಚುಕಟ್ಟುತನ, ಶುಚಿಯಾಗಿರುವುದು, ದುಂದುವೆಚ್ಚ ಮಾಡದಿರುವುದು-ಇವೆಲ್ಲವೂ ಸಾಧಕನ ಜೀವನದಲ್ಲಿರಬೇಕಾದ ಗುಣಗಳೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಯಾವುದೇ ವಿಷಯದಲ್ಲಿಯೂ ಅವ್ಯವಸ್ಥೆಯನ್ನು ಅವರು ಸಹಿಸುತ್ತಿರಲಿಲ್ಲ. ದುಂದುವೆಚ್ಚಕ್ಕಿಂತ ಜಿಪುಣತನವೇ ಮೇಲೆಂದು

ಅವರು ಹೇಳುತ್ತಿದ್ದರು. ಆಹಾರದ ವಿಷಯದಲ್ಲಿಯೂ ನಾವು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಮ್ಮ ಸುತ್ತಲೂ ಇರುವವರೊಡನೆ ಉತ್ತಮ ಸಂಬಂಧವನ್ನು ಬೆಳಸಿಕೊಳ್ಳುವುದರಿಂದ ಸಾಧನೆಗೆ ಪೂರಕವಾದ ಮನಸ್ಥಿತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗೆ ಆಧ್ಯಾತ್ಮಿಕ ಆದರ್ಶಕ್ಕೆ ಹಾಗೂ ಸಾಧನೆಗೆ ಅನುಕೂಲವಾದವುಗಳನ್ನೆಲ್ಲ ಅನುಸರಿಸಲು ನಾವು ಸಿದ್ಧರಾಗಿರಬೇಕು.

### ೨. ಪ್ರಾತಿಕೂಲಸ್ಯ ವರ್ಜನಂ

ಸಾಧನೆಗೆ ಪ್ರತಿಕೂಲವಾಗಿರುವುದೆಲ್ಲವನ್ನೂ ಬಿಟ್ಟುಬಿಡಬೇಕು – ವಿಶೇಷವಾಗಿ, ನಾರದರು ಹೇಳುವಂತೆ '**ದುಃಸಂಗಃ ಸರ್ವತಃ ಏವ ತ್ಯಾಜ್ಯಃ**''. ಏನೂ ಆಗಲಾರದೆಂಬ ಅತಿವಿಶ್ವಾಸದಿಂದ ನಾವು ದುಃಸಂಗದಿಂದ ದೂರವಿರದಿದ್ದರೆ ನಮಗರಿವಿಲ್ಲ ದಂತೆಯೇ ಆಧ್ಯಾತ್ಮಿಕ ಜೀವನದಲ್ಲಿ ಕ್ರಮೇಣ ಅವನತಿಯನ್ನು ಹೊಂದುತ್ತೇವೆ. ಶ್ರೀರಾಮಕೃಷ್ಣರು ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಿದ್ದರು: ಸ್ವಲ್ಪ ಇಳಿಜಾರಿರುವ ಪ್ರದೇಶದಲ್ಲಿ ಹೋಗುತ್ತಿರುವಾಗ ನಾವು ಕೆಳಮುಖ ಹೋಗುತ್ತಿದ್ದೇವೆಂಬ ಅರಿವೇ ಇರುವುದಿಲ್ಲ. ತುಂಬ ದೂರ ಹೋಗಿ ಹಿಂತಿರುಗಿ ನೋಡಿದಾಗಲೇ ನಾವು ಎಷ್ಟೊಂದು ಕೆಳಗೆ ಬಂದಿದ್ದೇವೆ ಎಂದು ಗೊತ್ತಾಗುವುದು.

ದುಷ್ಟರಾಗಲಿ ಸತ್ಪುರುಷರಾಗಲಿ ಅವರವರ ಗುಣಗಳ ತೀವ್ರತೆಗೆ ಅನುಸಾರವಾಗಿ ತಮ್ಮದೇ ಆದ ಸ್ಪಂದನವನ್ನು ತಮ್ಮ ಸುತ್ತಲೂ ಹರಡುತ್ತಾರೆ. ಆ ವಲಯಕ್ಕೆ ಬರುವವರು ಸ್ವಲ್ಪ ಮಟ್ಟಿಗಾದರೂ ಆ ಗುಣಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಆದ್ದರಿಂದ ನಾವು ಎಚ್ಚರಿಕೆಯಿಂದಿರಬೇಕು. ದುಃಸಂಗದಲ್ಲಿ ಇರಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಪ್ರಜ್ಞಾಪೂರ್ಣರಾಗಿದ್ದು ನಾಮಸ್ಮರಣೆ, ಪ್ರಾರ್ಥನೆ, ವಿವೇಕಾದಿಗಳ ಮೂಲಕ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಈಗಿನ ಕಾಲದ ಸಾಮಾಜಿಕ ಮಾಧ್ಯಮಗಳ (Social Media) ವಿಷಯದಲ್ಲಿಯೂ ಆಧ್ಯಾತ್ಮಿಕ ಸಾಧನೆಯನ್ನು ಗಂಭೀರವಾಗಿ ಸ್ವೀಕರಿಸುವ ಸಾಧಕರು ಎಚ್ಚರಿಕೆಯಿಂದಿರಬೇಕಾಗುತ್ತದೆ. ಅವುಗಳು ಮನಸ್ಸನ್ನು ಚಂಚಲವೂ ವಿಚಲಿತವೂ ಆಗುವಂತೆ ಮಾಡುವುದರ ಮೂಲಕ ಸಾಧನೆಗೆ ಅಡಚಣೆಗಳಾಗುತ್ತವೆ.


### ೩. ರಕ್ಷಿಷ್ಯತೀತಿ ವಿಶ್ವಾಸಃ

ದೇವರು ನಮ್ಮನ್ನು ಕೈಬಿಡುವುದಿಲ್ಲ, ರಕ್ಷಿಸಿಯೇ ರಕ್ಷಿಸುತ್ತಾನೆ — ಎಂಬ ದೃಢ ವಿಶ್ವಾಸ ಶರಣಾಗತಿಯ ಒಂದು ಮುಖ್ಯ ಲಕ್ಷಣ. ಒಬ್ಬ ನಾಸ್ತಿಕನಿರುತ್ತಾನೆ. ಅವನು ಒಮ್ಮೆ ಪರ್ವತಪ್ರದೇಶದಲ್ಲಿ ಅಡ್ಡಾಡಲು ಹೋಗಿದ್ದನು. ದೇವರಿಲ್ಲ ಎಂಬ ವಿಚಾರದಲ್ಲಿಯೇ ತಲ್ಲೀನನಾಗಿದ್ದನು. ತಾನು ನಡೆಯುತ್ತಿರುವ ದಾರಿಯ ಬಗ್ಗೆ ಗಮನವೇ ಇರಲಿಲ್ಲ. ಹೀಗೆ ಹೋಗುತ್ತಿರುವಾಗ ಕಾಲು ಜಾರಿ ಒಂದು ಪ್ರಪಾತಕ್ಕೆ ಬಿದ್ದುಬಿಟ್ಟನು. ಕೆಳಗೆ ಉರುಳಿಕೊಂಡು ಹೋಗುತ್ತಿರುವಾಗ ದೇವರದಯೆಯಿಂದ ಒಂದು ಮರದ ಕೊಂಬೆ ಅವನ ಕೈಗೆ ಸಿಕ್ಕಿತು. ಅದನ್ನು ಹಿಡಿದುಕೊಂಡು ನೇತಾಡತೊಡಗಿದನು. ಕೊಂಬೆ ಮುರಿಯುವದರಲ್ಲಿದೆ, ಕೈ ಸೋಲುತ್ತಿದೆ, ಕೆಳಗೆ ಬಿದ್ದರೆ ಸಾವೇ ಗತಿ. ಇಂತಹ ದಾರುಣ ಸ್ಥಿತಿಯಲ್ಲಿ ಅವನಿಗೆ ದೇವರ ನೆನಪಾಯಿತು. ಸಂಕಟದಲ್ಲಿ ವೆಂಕಟರಮಣ ಎನ್ನುವಂತೆ ಅವನೀಗ ''ಹೇ ದೇವ ನೀನಿರುವುದು ನಿಜವಾದರೆ ದಯವಿಟ್ಟು ನನ್ನನ್ನು ರಕ್ಷಿಸು''ಎಂದು ಪ್ರಾರ್ಥಿಸತೊಡಗಿದನು. ''ನನ್ನ ಅಸ್ತಿತ್ವವನ್ನೇ ನಿರಾಕರಿಸುವ ನಿನ್ನನ್ನು ನಾನು ಹೇಗೆ ರಕ್ಷಿಸಲಾದೀತು?'' ಎಂದು ದೇವವಾಣಿ ಕೇಳಿಸಿತು. ''ಇಲ್ಲ, ಇದೊಮ್ಮೆ ರಕ್ಷಿಸು. ಎಲ್ಲ ಕಡೆಯೂ ನೀನಿರುವೆ ಎಂದು ಸಾರಿಕೊಂಡು ತಿರುಗಾಡುತ್ತೇನೆ. ದಯವಿಟ್ಟು ನನ್ನನ್ನು ರಕ್ಷಿಸು'', ಎಂದು ಗೋಗರೆಯತೊಡಗಿದನು. ಆಗ ದೇವರು ಹೇಳಿದನು: ''ಆಗಲಿ, ನಾನು ರಕ್ಷಿಸುತ್ತೇನೆ. ನೀನು ಹಿಡಿದುಕೊಂಡಿರುವ ಕೊಂಬೆಯನ್ನು ಕೈಬಿಡು.'' ''ಏನೆಂದೆ! ನಾನೇನು ಹುಚ್ಚನೆ! ಕೊಂಬೆಯನ್ನು ಬಿಟ್ಟರೆ ನನ್ನ ಗತಿಯೇನು?'' ಎಂದು ನಾಸ್ತಿಕನು ಉದ್ಗರಿಸಿದನು. ಈ ಕತೆಯಲ್ಲಿ ವಿಶ್ವಾಸದ ಕೊರತೆಯನ್ನು ಕಾಣುತ್ತೇವೆ.

### ೪. ಗೋಪ್ತೃತ್ವವರಣಂ ತಥಾ

ಎಲ್ಲ ವಿಷಯದಲ್ಲಿಯೂ ಭಗವಂತನೊಬ್ಬನನ್ನೇ ಆಶ್ರಯಿಸುವುದು. ನಾರದರು ಹೇಳುವಂತೆ ''**ಅನ್ಯಾಶ್ರಯಾಣಾಂ ತ್ಯಾಗಃ**'' (ಭಗವಂತನನ್ನು ಹೊರತು ಬೇರೆಲ್ಲ ಆಶ್ರಯಗಳನ್ನೂ ತ್ಯಾಗ ಮಾಡುವುದು). ಸಾಮಾನ್ಯವಾಗಿ ಜನರು ಒಂದೇ ಇಷ್ಟದೇವತೆಯನ್ನು ಇಟ್ಟುಕೊಂಡಿದ್ದರೂ, ಒಂದೊಂದು ವಿಷಯಕ್ಕೂ ಒಂದೊಂದು ದೇವತೆಯನ್ನು ಆಶ್ರಯಿಸುತ್ತಾರೆ. ವಿಘ್ನ ನಿವಾರಣೆಗೆ ಗಣಪತಿ, ಸಂಕಟಗಳಲ್ಲಿ ವೆಂಕಟರಮಣ, ಧನಕ್ಕಾಗಿ ಧನಲಕ್ಷ್ಮಿ, ಕೀರ್ತಿ ಯಶಸ್ಸುಗಳಿಗಾಗಿ ದುರ್ಗೆ — ಹೀಗೆ ಬೇರೆ ಬೇರೆ ವಿಷಯಗಳಿಗೆ ಬೇರೆ ಬೇರೆ ದೇವತೆಗಳಿಗೆ ಹರಕೆ ಹೊರುತ್ತಾರೆ, ಪ್ರಾರ್ಥನೆ ಮಾಡುತ್ತಾರೆ. ವಿಶೇಷ ಪೂಜೆ ಸಲ್ಲಿಸುತ್ತಾರೆ. ಸಮಸ್ಯೆಗಳ ಪರಿಹಾರಕ್ಕಾಗಿ ವಿವಿಧ ಪೂಜೆ, ಹೋಮ, ಹವನ ಇತ್ಯಾದಿಗಳನ್ನು ಮಾಡಿಸುತ್ತಾರೆ. ಆದರೆ ಶರಣಾದವನು ಎಲ್ಲ ವಿಷಯಕ್ಕೂ ತನ್ನ ಇಷ್ಟದೇವತೆಯನ್ನೇ ಆಶ್ರಯಿಸುತ್ತಾನೆ — ಮಗು ಎಲ್ಲ ವಿಷಯಕ್ಕೂ ತಾಯಿಯನ್ನೇ ಆಶ್ರಯಿಸುವಂತೆ. ತಾಯಿ ಎಷ್ಟೇ ದುರ್ಬಲಳಾಗಿದ್ದರೂ ಅದಕ್ಕೆ ತಾಯಿಯ ಮಡಿಲಿನಲ್ಲಿದ್ದರೆ ಸಂಪೂರ್ಣ ನಿಶ್ಚಿಂತೆ. ಅನೇಕರು ಯಾವುದಾದರೂ ಸಂಕಟ ಪರಿಸ್ಥಿತಿಯಿಂದ ಅಥವಾ ವಿಪತ್ತಿನಿಂದ ಪಾರಾಗಲು ಸುಳ್ಳನ್ನೋ ಇನ್ನಾವ ವ್ಯಕ್ತಿಯನ್ನೋ ಆಶ್ರಯಿಸಬಹುದು.

ಭಗವಂತನನ್ನೇ ನೆಚ್ಚಿಕೊಂಡಿದ್ದರೆ ವಿವಿಧ ರೂಪಗಳಲ್ಲಿ ಅವನ ಸಹಾಯವು ನಮಗೆ ಲಭಿಸುತ್ತದೆ. ಒಂದು ಕಡೆ ತುಂಬ ನೆರೆ ಹಾವಳಿ. ಮನೆಗಳೆಲ್ಲ ಮುಳುಗುತ್ತಿವೆ. ಒಂದು ಮನೆಯಲ್ಲಿ ಒಬ್ಬಳೇ ಮುದುಕಿ ಇದ್ದಳು. ಆಕೆಯ ರಕ್ಷಣೆಗಾಗಿ ಒಂದು ದೋಣಿ ಬಂತು. ''ಇಲ್ಲ, ನಾನು ಬರುವುದಿಲ್ಲ, ನನ್ನನ್ನು ರಕ್ಷಿ



ಸಲು ಭಗವಂತನಿದ್ದಾನೆ'' ಎಂದು ಹೇಳಿ ದೋಣಿ ಹತ್ತಲು ನಿರಾಕರಿಸಿದಳು. ನೀರು ಮೇಲೇರುತ್ತ ಬರಲು ಎರಡನೆಯ ಅಂತಸ್ತಿಗೆ ಹೋದಳು. ಅಲ್ಲಿಯೂ ನೀರು ತುಂಬಿಕೊಳ್ಳಲು ಪ್ರಾರಂಭವಾಯಿತು. ಅವಳ ರಕ್ಷಣೆಗಾಗಿ ಮತ್ತೆ ದೋಣಿ ಬಂತು. ಆದರೆ ಅವಳು ತನ್ನ ದೃಢ ನಿರ್ಧಾರದಿಂದ ಕದಲಲಿಲ್ಲ. ದೇವರು ತನ್ನನ್ನು ರಕ್ಷಿಸುತ್ತಾನೆಂದು ಹೇಳಿ ದೋಣಿಯನ್ನು ಹತ್ತಲಿಲ್ಲ. ನೀರು ಮೇಲೇರತೊಡಗಿತು. ಈಗವಳು ಮನೆಯ ಛಾವಣಿಯ ಮೇಲೇರಿ ರಕ್ಷಣೆ ಪಡೆಯಬೇಕಾಯಿತು. ಅಲ್ಲಿಯೂ ನೀರು ತುಂಬಿಕೊಳ್ಳತೊಡಗಿತು. ಈಗ ಮೇಲಿನಿಂದ ಒಂದು ಹೆಲಿಕಾಪ್ಟರ್ ಬಂತು. ಅದರಿಂದ ಒಂದು ಹಗ್ಗ ಕೆಳಗಿಳಿಯಿತು. ಅದರೊಳಗಿರುವವರು ಮುದುಕಿಗೆ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊ ಎಂದು ಕೂಗಿ ಹೇಳಿದರು. ಈಗಲೂ ಅವಳ ಪ್ರತಿಕ್ರಿಯೆ ಹಿಂದಿನಂತೆಯೇ ಆಗಿತ್ತು. ಹೆಲಿಕಾಪ್ಟರ್ ಹೊರಟುಹೋಯಿತು. ಮುದುಕಿ ನೀರುಪಾಲಾದಳು. ಅವಳು ತನ್ನ ಕೊನೆಯುಸಿರಿನಲ್ಲಿ ದೇವರಿಗೆ ದೂರಿತ್ತಳು: ''ನಾನು ನಿನ್ನನ್ನು ನೆಚ್ಚಿಕೊಂಡು ಬೇರೆಲ್ಲ ಆಶ್ರಯಗಳನ್ನೂ ತೊರೆದೆ. ಆದರೆ ನೀನು ಈ ರೀತಿ ಕೈಬಿಡುವೆಯೆಂದು ಭಾವಿಸಿರಲಿಲ್ಲ''. ದೇವವಾಣಿ ಕೇಳಿಸಿತು: ''ನಿನ್ನ ರಕ್ಷಣೆಗಾಗಿ ನಾನು ದೋಣಿ, ಹೆಲಿಕಾಪ್ಟರ್‌ಗಳನ್ನು ಕಳಿಸಿದೆ. ಆದರೆ ನೀನು ಅವುಗಳನ್ನು ನಿರಾಕರಿಸಿದೆ, ನಾನೇನು ಮಾಡಲಿ.''

ಬೇರೆಲ್ಲ ಆಶ್ರಯಗಳನ್ನು ತ್ಯಾಗಮಾಡುವುದೆಂದರೆ ಇತರ ಸಹಾಯಗಳನ್ನು ನಿರಾಕರಿಸುವುದೆಂದಲ್ಲ. ಯಾಚಿತವಾಗಿ ಬಂದ ಸಹಾಯಗಳನ್ನು ಇದು ಭಗವಂತನ ಅನುಗ್ರಹವೆಂದು ಸ್ವೀಕರಿಸುವುದು. ದೇವರೇನೂ ಶಂಖಚಕ್ರಗದಾಪಾಣಿಯಾಗಿ ಬಂದು ನಮ್ಮನ್ನು ರಕ್ಷಿಸುವುದಿಲ್ಲ. ಗಜೇಂದ್ರ ಮೋಕ್ಷ ಚಿತ್ರದಲ್ಲಿ ನಾರಾಯಣನೇ ಬಂದು ರಕ್ಷಿಸುತ್ತಿರುವಂತೆ ತೋರಿಸಿದ್ದರೂ, ಅದು ಹಾಗೆಯೇ ಆಯಿತೆಂದು ಊಹಿಸಬೇಕಾಗಿಲ್ಲ. ಬಹುಶಃ ದೇವರ ಪ್ರೇರಣೆಯಂತೆ ಯಾರೋ ವ್ಯಕ್ತಿಯು ಬಂದು ಮೊಸಳೆಯನ್ನು ಕೊಂದು ಆನೆಯನ್ನು ರಕ್ಷಿಸಿರಬಹುದು.

ಯಾರಿಗೆ ಯಾವ ಆಶ್ರಯವೂ ಇಲ್ಲವೋ ಅವರನ್ನು ಭಗವಂತನೇ ರಕ್ಷಿಸುತ್ತಾನೆ. ಒಮ್ಮೆ ಓರ್ವ ಮಹಿಳೆ ಶ್ರೀರಾಮಕೃಷ್ಣರ ಹತ್ತಿರ ಬಂದು, ತನ್ನ ಸಂಕಟವನ್ನು ಹೇಳಿಕೊಂಡಳು: ''ಈ ಜೀವನದಲ್ಲಿ ನನ್ನ ಪಾಲಿಗೆ ಯಾರೂ ಇಲ್ಲ, ಯಾವ ಆಶ್ರಯವೂ ಇಲ್ಲ,'' ಎಂದು ರೋದಿಸತೊಡಗಿದಳು. ಶ್ರೀರಾಮಕೃಷ್ಣರು ಅದನ್ನು ಕೇಳಿ ಸಂತೋಷದಿಂದ ನರ್ತಿಸತೊಡಗಿದರು. ''ಯಾರಿಗೆ ಯಾರು ಇಲ್ಲವೋ ಅವರಿಗೆ ದೇವರೇ ಆಶ್ರಯ ನೀಡುತ್ತಾನೆ'' ಎಂದು ಹೇಳಿ ಆಕೆಯನ್ನು ಸಮಾಧಾನ ಪಡಿಸಿದರು.

ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ಆಧ್ಯಾತ್ಮಿಕ ದೃಷ್ಟಿಯಿಂದ ತೀರ ಸಂದಿಗ್ಧ ಪರಿಸ್ಥಿತಿಯಲ್ಲಿರುವುದು ಒಳ್ಳೆಯದು. ನಾವು ನೆಚ್ಚಿಕೊಂಡಿದ್ದೆಲ್ಲ ಕೈಬಿಟ್ಟು ಹೋಗಿ ಯಾವ ಪ್ರಾಪಂಚಿಕ ಆಸರೆಯೂ ಇಲ್ಲದೆ ಉಳಿದರೆ ಅದು ಒಳ್ಳೆಯದೇ. ಎಲ್ಲ ಹಳೆಯ ಮೌಲ್ಯಗಳು, ಮೈತ್ರಿಗಳು ಮತ್ತು ಆಸಕ್ತಿಗಳು ಕಡಿದುಹೋದರೆ ಉತ್ತಮವೇ ಆಯಿತು. ಎಲ್ಲ ರೀತಿಯ ಬಾಹ್ಯ ಸಾಂತ್ವನಗಳು ಮತ್ತು ಇತರರ ಮೇಲಿನ ಭರವಸೆಯೆಲ್ಲ ಮುರಿದುಬೀಳುವುದೂ ಒಳ್ಳೆಯದೇ. ಆಗ ನೀವು ಏಕಮಾತ್ರ ಆಶ್ರಯನೂ ಸಖನೂ ಮಾರ್ಗದರ್ಶಿಯೂ ಆದ ಭಗವಂತನ ಕಡೆಗೆ ತಿರುಗುತ್ತೀರಿ.'' *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ', ಪು. ೨೩೧)*

### ೫. ಆತ್ಮನಿಕ್ಷೇಪ

ಎಂದರೆ ತನ್ನನ್ನು ಸಂಪೂರ್ಣವಾಗಿ ಭಗವಂತನಿಗೆ ಅರ್ಪಿಸಿಕೊಳ್ಳುವುದು. ತಾನು ತನ್ನದೆಂಬುದು ಏನೂ ಇಲ್ಲದಿರುವುದು. ಯಾವ ವ್ಯಕ್ತಿಯೂ ತನ್ನನ್ನು ತಾನು ಕಳೆದುಕೊಳ್ಳಲು, ತನ್ನ ವ್ಯಕ್ತಿಭಾವವನ್ನು ಬಿಡಲು, ಇಷ್ಟಪಡುವುದಿಲ್ಲ. ನಮ್ಮ ದೇಹದ ಉಳಿವಿಗಾಗಿ ನಾವು ಆಹಾರವನ್ನು ಬಯಸುವಂತೆ, ಅಹಂಕಾರ ಅಥವಾ ವ್ಯಕ್ತಿಭಾವದ ಉಳಿವಿಗಾಗಿ ಅಧಿಕಾರ, ಸ್ಥಾನಮಾನ, ಪ್ರಶಂಸೆ, ಹಣ, ವಿವಿಧ ವಸ್ತುಗಳು ಮುಂತಾದವುಗಳನ್ನು ವ್ಯಕ್ತಿಯು ಬಯಸುತ್ತಾನೆ. ಆದರೆ ಭಕ್ತನ ಉಳಿವು ಅಳಿವುಗಳಲ್ಲಿ ಭಗವಂತನೇ. ಆದ್ದರಿಂದ ಅವನು ತನಗಾಗಿ ಏನನ್ನೂ ಬಯಸುವುದಿಲ್ಲ. ಭಗವಂತನಲ್ಲದೆ ತನಗಿನ್ನೇನೂ ಬೇಡ ಎಂಬ ಭಾವದಿಂದ ಅವನು ಒಡಗೂಡಿರುತ್ತಾನೆ. ಸೂಫಿ ಸಂತನೊಬ್ಬನಿಗೆ ಒಂದು ದರ್ಶನವಾಗುತ್ತದೆ. ಭಗವಂತನು ಇಡೀ ಜಗತ್ತನ್ನು ಸೃಷ್ಟಿಸಿ ಕೊನೆಯಲ್ಲಿ ಮಾನವರನ್ನು ಸೃಷ್ಟಿಸಿದನು. ಅವರ ಮುಂದೆ ಈ ಜಗತ್ತಿನಲ್ಲಿ ದೊರೆಯಬಹುದಾದ ಪರಮಸುಖವನ್ನು ಇರಿಸಿದನು. ಅದನ್ನರಸಿಕೊಂಡು ಶೇಕಡ ೯೦ ಜನರು ಹೊರಟುಹೋದರು. ಉಳಿದ ಶೇಕಡ ೧೦ ಜನರ ಮುಂದೆ ಸ್ವರ್ಗಸುಖವನ್ನು ತೋರಿಸಿದನು. ಅವರಲ್ಲಿ ಶೇಕಡ ೯೦ ಜನರು ಅದರ

ಹಿಂದೆ ಓಡಿದರು. ಉಳಿದ ಶೇಕಡ ಹತ್ತು ಜನರಿಗೆ ನರಕಯಾತನೆಯನ್ನು ತೋರಿಸಿದನು. ಅವರಲ್ಲಿ ಶೇಕಡ ೯೦ ಜನರು ನರಕಯಾತನೆಗೆ ಹೆದರಿ ಕಾಲಿಗೆ ಬುದ್ಧಿ ಹೇಳಿದರು. ಉಳಿದವರು ಕೆಲವೇ ಮಂದಿ. ''ನಿಮಗೇನು ಬೇಕೆ''ಂದು ದೇವರು ಅವರನ್ನು ಕೇಳಿದನು. ''ನಮಗೇನು ಬೇಕೆಂದು ನಿನಗೇ ಗೊತ್ತು'' ಎಂದು ಅವರು ಹೇಳಿ ತಲೆ ತಗ್ಗಿಸಿದರು. ಅಂದರೆ ಅವರಿಗೆ ದೇವರು ಮಾತ್ರ ಬೇಕಿತ್ತು. ಸುಖದ ಬೆನ್ನು ಹತ್ತಿ ಓಡದೆ, ಕಷ್ಟಕಂಜಿಯೂ ಓಡದೆ ಇರುವವರಿಗೆ ದೇವರು ಲಭಿಸುತ್ತಾನೆ. ತನ್ನದೇನಿಲ್ಲ, ತನಗೇನೂ ಬೇಡ ಎಂಬ ಸ್ಥಿತಿಯಲ್ಲಿಯೇ ಒಂದು ವಿಶೇಷ ಆನಂದವಿದೆ, ಎಂಬುದು ಭಕ್ತನಿಗೆ ತಿಳಿದಿರುತ್ತದೆ.

### ೬. ಕಾರ್ಪಣ್ಯ

ಮೇಲಿನ ಆತ್ಮನಿಕ್ಷೇಪದಿಂದ ಉಂಟಾಗುವ ದೈನ್ಯತೆಗೆ ಕಾರ್ಪಣ್ಯವೆಂದು ಹೆಸರು. ಇಲ್ಲಿ ಕಾರ್ಪಣ್ಯವೆಂದರೆ ಕೀಳರಿಮೆಯಲ್ಲ. ಕೃತಕವಾದ ನಮ್ರತೆಯೂ ಅಲ್ಲ. ಅನೇಕ ವಿನಯವಂತರಲ್ಲಿ ಬಲವಾದ ಅಹಂಕಾರವು ಅಡಗಿರುತ್ತದೆ. ಅದೇ ವಿನಯರೂಪದಲ್ಲಿ ವ್ಯಕ್ತವಾಗುತ್ತದೆ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ನಮಗೆ ಬೇಕಾಗಿರುವುದು ಸುಮ್ಮನೆ ತೋರಿಕೆಯ ನಮ್ರತೆಯಲ್ಲ, ಆದರೆ ನಮ್ಮ ಆಂತರಿಕ ದಿವ್ಯತೆಯನ್ನು ಅವಲಂಬಿಸಿದ ಘನತೆ, ಗಾಂಭೀರ್ಯ. ಭಗವದರ್ಪಣೆಯ ಭಾವ, ವೈರಾಗ್ಯ ಮನೋಭಾವ, ನೈತಿಕ ಸರಿ–ತಪ್ಪುಗಳನ್ನು ಒಪ್ಪಿಕೊಳ್ಳುವ ಔದಾರ್ಯ — ಇವುಗಳಲ್ಲದೆ ಆಧ್ಯಾತ್ಮಿಕ ಜೀವನ ಅತ್ಯಂತ ಕಷ್ಟ.'' *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ', ಪು. ೯೧)*

ತನ್ನನ್ನು ನಿಂದಿಸಿಕೊಳ್ಳುವುದೂ ದೈನ್ಯತೆಯಲ್ಲ. ತನ್ನ ಲೋಪದೋಷಗಳನ್ನೇ ದೊಡ್ಡದು ಮಾಡಿ, ಅವುಗಳ ಬಗ್ಗೆಯೇ ಚಿಂತಿಸುತ್ತ, ತನ್ನನ್ನು ತಾನು ಹಳಿಯುತ್ತಿರುವುದೂ ಸರಿಯಲ್ಲ. ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

**ಆತ್ಮನಿಂದಾತ್ಮಪೂಜಾ ಚ ಪರನಿಂದಾ ಪರಸ್ತವಃ ।**
**ಅನಾಚರಿತಮಾರ್ಯಾಣಾಂ ವೃತ್ತಮೇತಚ್ಚತುರ್ವಿಧಮ್ ॥**

'ಆತ್ಮನಿಂದೆ, ಆತ್ಮಪ್ರಶಂಸೆ, ಪರನಿಂದೆ ಮತ್ತು ಇತರರ ಮುಖಸ್ತುತಿ — ಈ ನಾಲ್ಕು ಸುಸಂಸ್ಕೃತರಿಗೆ ಯೋಗ್ಯವಾದ ಕ್ರಿಯೆಗಳಲ್ಲ.'

ಸ್ವಾಮಿ ಯತೀಶ್ವರಾನಂದರಿಗೆ ಭಕ್ತರೊಬ್ಬರು ಒಂದು ಪತ್ರ ಬರೆದಿದ್ದರು. ಅವರ ಸೇವಕರು ಅದನ್ನು ಅವರಿಗೆ ಓದಿ ಹೇಳುತ್ತಿದ್ದರು. ಅದರಲ್ಲಿ, ನಾನು ಧ್ಯಾನ ಮಾಡಲಾರೆ, ನನ್ನ ಮನಸ್ಸು ಚಂಚಲ, ನಾನು ಕೆಟ್ಟ ಸಂಸ್ಕಾರಗಳನ್ನು ಪಡೆದು ಬಂದಿರಬೇಕು, ನನಗೆ ಆ ದೋಷವಿದೆ, ಈ ದೋಷವಿದೆ — ಹೀಗೆ ಆ ಪತ್ರ ಆತ್ಮನಿಂದೆಯಿಂದ ತುಂಬಿಹೋಗಿತ್ತು. ಪತ್ರ ಇಂಗ್ಲಿಷಿನಲ್ಲಿತ್ತು. ಸ್ವಾಮೀಜಿಯವರು ಮುಗುಳ್ನಗುತ್ತ ಸೇವಕನಿಗೆ ಹೇಳಿದರು, ''ಅದರಲ್ಲಿ ಎಷ್ಟು 'ನಾನು'ಗಳಿವೆ ಎಣಿಸು'' ಎಂದು. ಸೇವಕರು ಎಣಿಸಿ ''೪೯ 'ನಾನು'ಗಳಿವೆ'' ಎಂದು ಹೇಳಿದರು. ಆಗ ಯತೀಶ್ವರಾನಂದರು ಹೇಳಿದರು: ''ನಿನ್ನಲ್ಲಿ ಇಷ್ಟೊಂದು ನಾನು ಇದ್ದರೆ ಹೇಗೆ ಧ್ಯಾನ ಮಾಡಲು ಸಾಧ್ಯ ಎಂದು ಪತ್ರ ಬರೆ.''

ನಾವು ನಮ್ಮ ದೋಷಗಳನ್ನೇ ಮೆಲಕುಹಾಕುತ್ತಿದ್ದರೆ ಅವುಗಳು ಹೆಚ್ಚು ಪ್ರಬಲವಾಗುತ್ತವೆ. ಇದು ಕತ್ತಲೆಯ ಕಡೆ ಮುಖಮಾಡಿಕೊಂಡು ಬೆಳಕಿನ ಕಡೆ ಹಿಂದಡಿಯಿಡುತ್ತ ಹೋಗುವಂತೆ. ಆಗ ಎಡುವುವ ಸಾಧ್ಯತೆ ಬಹಳ. ಶರಣಾಗತಿಯ ಭಾವವಿದ್ದರೆ ನಾವು ತಪ್ಪು ಮಾಡುವುದು ಕಡಿಮೆಯಾಗುತ್ತ ಬರುತ್ತದೆ. ಪೂರ್ಣ ಶರಣಾಗತಿಯ ಸ್ಥಿತಿಯಲ್ಲಿ ತಪ್ಪುಗಳೂ ಒಪ್ಪುಗಳಾಗುತ್ತವೆ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ಒಂದು ವಿಷಯ ನೆನಪಿಡಿ, ಸಂಪೂರ್ಣ ಶರಣಾಗತಿಯನ್ನು ಅಭ್ಯಸಿಸಿದರೆ ತಪ್ಪು ಹೆಜ್ಜೆ ಇಡಲು ಸಾಧ್ಯವೇ ಇಲ್ಲ. ಜನರು ನಾನು ಎಲ್ಲವನ್ನೂ ದೇವರಿಗೇ ಬಿಟ್ಟು ಬಿಟ್ಟಿದ್ದೇನೆ ಎಂದು ಹೇಳುತ್ತ ತಮ್ಮ ಮನಸ್ಸಿಗೆ ಬಂದಂತೆ ಶರಣಾಗತಿಯು ಜಗತ್ತಿನ ವಿಷಯಗಳಲ್ಲಿ ಮತ್ತು ತನ್ನ ಆಸೆಗಳಲ್ಲಿ ಆಸಕ್ತನಾಗಿರುವ ವ್ಯಕ್ತಿಗೆ ಶರಣಾಗತಿ ದೂರದ ಮಾತು. ಕನಿಷ್ಠಪ್ರಮಾಣದ ವೈರಾಗ್ಯವಾದರೂ ಇಲ್ಲದಿದ್ದರೆ ಶರಣಾಗತಿ ಅಸಾಧ್ಯ. ಸಂಪೂರ್ಣ ಶರಣಾಗತಿಗೆ ಸಂಪೂರ್ಣ ವೈರಾಗ್ಯ ಬೇಕು.''

*('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ'', ಪು. ೨೪೦)*

ಶರಣಾಗತಿಯ ಈ ಆರು ಲಕ್ಷಣಗಳನ್ನು ಆಧ್ಯಾತ್ಮಿಕ ಸಾಧನೆಯ ವಿವಿಧ ಹಂತಗಳಾಗಿಯೂ ವಿವರಿಸಬಹುದು. **ಆನುಕೂಲ್ಯಸ್ಯ ಸಂಧಾನ ಮತ್ತು ಪ್ರಾತಿಕೂಲಸ್ಯ ವರ್ಜನ** ಇವೆರಡು ಆಧ್ಯಾತ್ಮಿಕ ಸಾಧನೆಯ ಮೊದಲ ಹಂತ. ಪ್ರಾರಂಭದಲ್ಲಿ ಆಧ್ಯಾತ್ಮಿಕ ಆದರ್ಶದ ಸಸಿಯನ್ನು ಸತ್ಸಂಗವೇ ಮುಂತಾದ ನೀರುಗೊಬ್ಬರಗಳನ್ನಿತ್ತು ಪೋಷಿಸಬೇಕು. ಮತ್ತೆ ಅದು ದುಃಸಂಗದ ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು. ಹೊರಗಿನ ವಿರುದ್ಧ ಪ್ರಭಾವಗಳಿಂದ ನಮ್ಮ ಆದರ್ಶವು ಬತ್ತಿಹೋಗಬಹುದು. ಒಂದು ಸಸಿಗೆ ಸುತ್ತಲೂ ಬೇಲಿ ಹಾಕಿ ಹಸು ಕುರಿ ಮುಂತಾದವುಗಳು ಅದನ್ನು ತಿಂದುಹಾಕದಂತೆ ನೋಡಿಕೊಳ್ಳುವಂತೆ, ಆಧ್ಯಾತ್ಮಿಕ ಆದರ್ಶವನ್ನು ಪ್ರಾತಿಕೂಲಸ್ಯವರ್ಜನವೆಂಬ ಬೇಲಿ ಹಾಕಿ ರಕ್ಷಿಸಬೇಕು. ಸಸಿ ಬೆಳೆದ ಮೇಲೆ ಅದು ದೃಢವಾದ ಮರವಾಗುತ್ತದೆ. ಹಾಗೆಯೇ ಭಗವಂತನು ರಕ್ಷಿಸಿಯೇ ರಕ್ಷಿಸುತ್ತಾನೆ ಎಂಬ ದೃಢವಿಶ್ವಾಸ ಉಂಟಾಗುತ್ತದೆ. ಇಂತಹ ಸ್ಥಿತಿಯಲ್ಲಿ ಭಕ್ತನು ಪ್ರತಿಕೂಲ ಪರಿಸ್ಥಿತಿಯಲ್ಲಿ ವಿಚಲಿತನಾಗದೆ ಉಳಿಯುತ್ತಾನೆ. ಎಲ್ಲ ಸನ್ನಿವೇಶಗಳೂ ಅವನಿಗೆ ಭಗವಂತನೆಡೆಗೆ ಮುನ್ನಡೆಯಲು ಅನುಕೂಲವೇ ಆಗುತ್ತವೆ — ಹಾಯಿ ಹಡಗಿನಲ್ಲಿ ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದ್ದರೂ ಅದರ ಪ್ರಯೋಜನವನ್ನು ಪಡೆದು ಹಡಗನ್ನು ಮುನ್ನಡೆಸಿಕೊಂಡು ಹೋಗುವಂತೆ. ಇದರ ಪರಿಣಾಮವಾಗಿ ಭಕ್ತನು ಬೇರೆಲ್ಲ ಆಶ್ರಯಗಳನ್ನು ತೊರೆದು ಎಲ್ಲ ವಿಷಯದಲ್ಲಿಯೂ ಭಗವಂತನನ್ನೇ ಆಶ್ರಯಿಸುತ್ತಾನೆ(ಗೋಪ್ತೃತ್ವ

ವರಣಂ). ಮುಂದಿನ ಹಂತವೇ ಭಕ್ತನು ತನ್ನನ್ನು ಸಂಪೂರ್ಣವಾಗಿ ಭಗವಂತನಿಗೆ ಅರ್ಪಿಸಿಕೊಳ್ಳುವುದು(ಆತ್ಮನಿಕ್ಷೇಪ). ಇದರ ಪರಿಣಾಮವಾಗಿ ಅವನಲ್ಲಿ ದೈನ್ಯತೆಯ ಭಾವ ಉಂಟಾಗುತ್ತದೆ. (ಕಾರ್ಪಣ್ಯ)

ಸ್ವಾಮಿ ಯತೀಶ್ವರಾನಂದರೂ ಶರಣಾಗತಿಯ ಮೂರು ಹಂತಗಳನ್ನು ವಿವರಿಸುತ್ತಾರೆ:

೧) ಆಧ್ಯಾತ್ಮಿಕ ಸಾಧನೆಯೇ ಆಗಲಿ ಕರ್ತವ್ಯ ಪರಿಪಾಲನೆಯೇ ಆಗಲಿ ಮೊದಲು ಅದು ಅಹಂಕಾರಮೂಲವಾಗಿಯೇ ಇರುತ್ತದೆ.
೨) ಅನಂತರ ನಮ್ಮ ಕರ್ಮದ ಫಲವನ್ನು ಭಗವಂತನಿಗೆ ಅರ್ಪಿಸಲು ಪ್ರಯತ್ನಿಸುತ್ತೇವೆ.
೩) ಕೊನೆಯಲ್ಲಿ ನಾವು ಎಲ್ಲವನ್ನೂ ಭಗವತ್ ಪ್ರೀತಿಗಾಗಿಯೇ ಮಾಡುತ್ತೇವೆ. ನಮ್ಮ ಮನಸ್ಸು ಶುದ್ಧವಾದಂತೆಲ್ಲ ಭಗವತ್ಸಾನ್ನಿಧ್ಯವನ್ನು ನಾವು ಹೆಚ್ಚು ಅನುಭವಿಸುತ್ತೇವೆ. ಆಗಲೇ ಯಂತ್ರ - ಯಂತ್ರಿ ಭಾವ ಸಾಧ್ಯವಾಗುವುದು.

*('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ', ಪು. ೨೪೬)*

ನಮ್ಮಲ್ಲಿ ನಿಜವಾಗಿಯೂ ಶರಣಾಗತಿ ಇದೆ ಎಂಬುದರ ಸೂಚಕವಾಗಿ ಮೂರು ಮನೋಭಾವಗಳು ನಮ್ಮಲ್ಲಿ ಇರಬೇಕಾಗುತ್ತದೆ: ಸ್ವೀಕಾರ ಮನೋಭಾವ, ಸಕಾರಾತ್ಮಕ ಮನೋಭಾವ ಮತ್ತು ವಿಶಾಲ ಮನೋಭಾವ.

### ಸ್ವೀಕಾರ ಮನೋಭಾವ

ನಮ್ಮ ಪಾಲಿಗೆ ಬಂದುದೆಲ್ಲವನ್ನೂ ಒಪ್ಪಿಕೊಳ್ಳುವುದು-ಅದು ಕೆಲಸವಿರಬಹುದು, ವಾತಾವರಣವಿರಬಹುದು, ಜನರಿರಬಹುದು ಅಥವಾ ಕಷ್ಟ-ಸಮಸ್ಯೆಗಳಿರಬಹುದು. ಸ್ವಾಮಿ ವಿವೇಕಾನಂದರು ಹೇಳುವಂತೆ, ನಾವು ಯಾವುದಕ್ಕೆ ಯೋಗ್ಯರಾಗಿರುತ್ತೇವೆಯೋ ಅದನ್ನೇ ಪಡೆಯುತ್ತೇವೆ. ನಮ್ಮ ಅಹಂಕಾರವನ್ನು ಬಿಟ್ಟು ಇದನ್ನು ಒಪ್ಪಿಕೊಳ್ಳುವ ಔದಾರ್ಯ ನಮಗಿರಬೇಕು. ನಮಗೇ ಈ ಕಷ್ಟ ಬರಬೇಕೇ ಎಂದು ಗೊಣಗಾಡುವುದು, ಪರಿತಪಿಸುವುದು, ಪರಿಸ್ಥಿತಿಯನ್ನು ವಿಧಿಯನ್ನು ದೂರುವುದು ಅಥವಾ ನನ್ನ ಕರ್ಮ ಎಂದು ಹಣೆ ಹಣೆ ಚಚ್ಚಿಕೊಳ್ಳುವುದು ಶರಣಾಗತಿಯ ಲಕ್ಷಣವಲ್ಲ. ಸ್ವಾಮಿ ಯತೀಶ್ವರಾನಂದರು ಹೇಳುವಂತೆ, ಸರ್ವತ್ಯಾಗಕ್ಕಿಂತ ಮಿಗಿಲಾದ ತ್ಯಾಗ ಎಲ್ಲವನ್ನೂ ಒಪ್ಪಿಕೊಳ್ಳುವ ಮನೋಭಾವ – Acceptence is greater sacrifice than renumeration. ನಾವು ಅಧಿಕಾರ, ಐಶ್ವರ್ಯ, ಸಂಸಾರ ಎಲ್ಲವನ್ನೂ ತ್ಯಾಗ ಮಾಡಬಹುದು. ಆದರೆ ಸ್ವೀಕರಿಸುವ ಮನೋಭಾವ ಇಲ್ಲದಿದ್ದರೆ ನಾವು ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯಲಾಗುವುದಿಲ್ಲ. ಸಾಧನೆಗೆ ಸ್ವಸ್ಥವಾದ ಮನಸ್ಸು ಆವಶ್ಯಕ. ಅದು ಸರಿಯಿಲ್ಲ ಇದು ಸರಿಯಿಲ್ಲ; ಅವರು ಸರಿಯಿಲ್ಲ ಇವರು ಸರಿಯಿಲ್ಲ ಎಂದು ತೆಗಳುತ್ತಿದ್ದರೆ ಸ್ವಸ್ಥಮನಸ್ಸು ಇರಲು ಸಾಧ್ಯವಿಲ್ಲ. ಹಾಗಾದರೆ ದುಷ್ಟರನ್ನೂ ಕೆಟ್ಟವಾತಾವರಣವನ್ನೂ ನಾವು ಒಪ್ಪಿಕೊಳ್ಳಬೇಕೇ, ಸ್ವೀಕರಿಸಬೇಕೇ ಎಂದು ಕೇಳಬಹುದು. ಇದು ಕೆಟ್ಟದ್ದಕ್ಕೆ ಅನ್ವಯಿಸುವುದಿಲ್ಲ. ಅನೇಕರಲ್ಲಿ ಒಳ್ಳೆಯ ಪರಿಸ್ಥಿತಿ ಯನ್ನೂ ಒಪ್ಪಿಕೊಳ್ಳುವ ಮನೋಭಾವ ಇರುವುದಿಲ್ಲ; ತಮ್ಮ ವೈಯಕ್ತಿಕ ಬೇಕುಬೇಡಗಳಿಗೆ ಅನುಗುಣವಾಗಿ ದೂರುತ್ತಾ ಹೋಗುತ್ತಾರೆ. ಇದು ಶರಣಾಗತಿಯ ಚಿಹ್ನೆಯಲ್ಲ. ಇಂಗ್ಲಿಷ್‌ನಲ್ಲಿ ಒಂದು ಪ್ರಸಿದ್ಧವಾದ ಹೇಳಿಕೆಯಿದೆ: "ಹೇ ಪ್ರಭು, ನಾನು ಬದಲಾಯಿಸಲಾಗದುದನ್ನು ಒಪ್ಪಿಕೊಳ್ಳುವ ಶಾಂತ ಮನಸ್ಸನ್ನು ಕೊಡು, ನಾನು ಬದಲಾಯಿಸಬಹುದಾದನ್ನು ಬದಲಾಯಿಸುವ ಧೈರ್ಯವನ್ನು ಕೊಡು, ಮತ್ತು ಇವೆರಡರ ವ್ಯತ್ಯಾಸವನ್ನು ಅರಿಯುವ ವಿವೇಕವನ್ನು ಕೊಡು."

ಒಬ್ಬ ಭಕ್ತನು ಯಾವಾಗಲೂ ಅದು ಸರಿಯಿಲ್ಲ ಇದು ಸರಿಯಿಲ್ಲ ಎಂದು ದೇವರ ಮುಂದೆ ದೂರುತ್ತಿದ್ದನು. ಈ ಜೀವನವೇ ಬೇಡ ಎಂದು ಗೋಗರೆಯುತ್ತಿದ್ದನು. ದೇವರು ಅವನಿಗೊಂದು ಸುಂದರ ಹೂವನ್ನು ತೋರಿಸಿ, "ನೋಡು, ಇದರ ಸೌಂದರ್ಯವನ್ನು ಸವಿಯಲಾರೆಯಾ?" ಎಂದು ಕೇಳಿದನು. ಭಕ್ತನು, "ಅದು ಸೌಂದರ್ಯವೇ ಅಲ್ಲ" ಎಂದನು. ಸುಂದರ ಪ್ರಾಕೃತಿಕ ದೃಶ್ಯವನ್ನು ತೋರಿಸಿ, "ನೋಡು, ಇದೆಷ್ಟು ಸುಂದರವಾಗಿದೆ" ಎಂದನು. ಭಕ್ತನು, "ಈ ಹೊಲಸು ಬೇಡ" ಎಂದನು. ಹೀಗೆ ಎಲ್ಲವನ್ನೂ ತಿರಸ್ಕರಿಸತೊಡಗಿದನು. ದೇವರಿಗೆ ಬೇಸರವಾಗಿ, "ನೀನು ನರಕದಲ್ಲಿರುವುದಕ್ಕೆ ಯೋಗ್ಯ" ಎಂದು ಹೇಳಿ ಅವನನ್ನು ಬೃಹತ್ ನಗರದ ಬಹುಮಹಡಿಯ ಕಟ್ಟಡವೊಂದರಲ್ಲಿ ಕರೆದುಕೊಂಡು ಹೋಗಿಬಿಟ್ಟನು.

ಶ್ರೀಮಾತೆ ಶಾರದಾದೇವಿಯವರ ಜೀವನದಲ್ಲಿ ಒಂದು ಬೋಧಪ್ರದ ಘಟನೆ ಬರುತ್ತದೆ. ಆಗ ಅವರು ಉದ್ಬೋಧನ ಮನೆಯಲ್ಲಿದ್ದರು. ನಿತ್ಯಪೂಜೆ ಮಾಡುವ ಸ್ವಾಮಿಗಳು ಖಾಯಿಲೆ ಬಿದ್ದರು. ಅವರ ಬದಲಿಗೆ ಪೂಜೆ ಮಾಡಲು ಬೇಲೂರು ಮಠದಿಂದ ಇನ್ನೊಬ್ಬರು ಸ್ವಾಮಿಗಳನ್ನು ಕಳಿಸಿದ್ದರು. ಬೇಲೂರು ಮಠದಿಂದ ಬಂದ ಸ್ವಾಮಿಗಳು ಮೊದಲನೆಯ ದಿನ ಪೂಜೆಗೆ ಕುಳಿತಿದ್ದಾರೆ. ಪಕ್ಕದ ಕೋಣೆಯಲ್ಲಿ ಕೆಲವು ಭಕ್ತರು ಮೊದಲನೆಯ ಮಹಾಯುದ್ಧದ ಬಗ್ಗೆ ಜೋರಾಗಿ ಚರ್ಚೆ ನಡೆಸುತ್ತಿದ್ದರು. ಇನ್ನೊಂದು ಕೋಣೆಯಲ್ಲಿ ಶ್ರೀಮಾತೆಯವರು ರಾಧು ಮುಂತಾದವರೊಡನೆ ಕುಳಿತಿದ್ದರು. ರಾಧು ಶ್ರೀಮಾತೆಯವರನ್ನು ನಾವು ಜಯರಾಂಬಾಟಿಗೆ ಹೋಗೋಣವೆಂದು ಪೀಡಿಸುತ್ತಿದ್ದಳು. "ಇಷ್ಟೆಲ್ಲ ಗಲಾಟೆಯ ಮಧ್ಯೆ ಹೇಗಪ್ಪ ಪೂಜೆ ಮಾಡುವುದು?" ಎಂದು ಪೂಜಾರಿ ಸ್ವಾಮಿಗಳು ಮನಸ್ಸಿನೊಳಗೆ ಕುದಿಯುತ್ತಿದ್ದರು. ಮಂತ್ರ ಮರೆತು ಹೋಗುತ್ತಿದೆ, ಪೂಜೆ ಮುಂದುವರಿಯುತ್ತಿಲ್ಲ. ಬಹುಶಃ ಶ್ರೀಮಾತೆಯವರಿಗೆ ಇದು ಅರ್ಥವಾಗಿರಬೇಕು. ಅವರು ಗಟ್ಟಿಯಾಗಿ ಸ್ವಾಮಿಗಳಿಗೆ ಕೇಳಿಸುವಂತೆ "ರಾಧಿ, ದೇವರು ಎಲ್ಲಿಟ್ಟಿರುತ್ತಾನೆಯೋ ಅಲ್ಲಿಯೇ ಶಾಂತವಾಗಿರಬೇಕು," ಎಂದು

ಹೇಳಿದರು. ಈ ಮಾತು ಕಿವಿಗೆ ಬಿದ್ದಾಕ್ಷಣ ಸ್ವಾಮಿಗಳ ಮನಸ್ಸು ಸಮಾಧಾನವಾಯಿತು. ಶಾಂತ ರೀತಿಯಿಂದ ಪೂಜೆ ಮುಂದು ವರಿಸಿದರು.

### ಸಕಾರಾತ್ಮಕ ಮನೋಭಾವ

ದೋಷದೃಷ್ಟಿ ಇಲ್ಲದಿರುವುದು. ಇತರರಲ್ಲಿ ದೋಷವನ್ನು ನೋಡುವುದೆಂದರೆ ನಾನು ಇತರರಿಗಿಂತ ಶ್ರೇಷ್ಠ ಎಂದು ತನ್ನ ಅಹಂಕಾರವನ್ನು ಮುಂದೆ ಮಾಡುವುದು. ಇದು ಶರಣಾಗತಿಗೆ ವಿರುದ್ಧವಾದುದು. ಶರಣಾಗತನು ಎಲ್ಲದರಲ್ಲಿಯೂ ಒಳ್ಳೆಯ ದನ್ನು ಕಾಣಲು ಇಷ್ಟಪಡುತ್ತಾನೆ. ಒಬ್ಬ ಹಿರಿಯ ವ್ಯಕ್ತಿಯು ಹಳ್ಳಿಯ ಪ್ರದೇಶದಲ್ಲಿ ಹೋಗುತ್ತಿದ್ದನು. ಮೇಲೆ ಹಕ್ಕಿಗಳ ಗುಂಪು ಹಾರುತ್ತಿತ್ತು. ಒಂದು ಹಕ್ಕಿಯ ಹಿಕ್ಕೆ ಅವನ ಹೆಗಲ ಮೇಲೆ ಬಿತ್ತು. ಅವನು ಮೇಲೆ ಹಕ್ಕಿಗಳ ಕಡೆ ಕಣ್ಣು ಹಾಯಿಸಿ, ''ಸದ್ಯ ಹಸುಗಳು ಹಾರುವುದಿಲ್ಲವಲ್ಲ!'' ಎಂದು ಉದ್ಗರಿಸಿದನು. ಒಂದು ಕೊಠಡಿ ಅನೇಕ ದಿನಗಳಿಂದ ಅದರಲ್ಲಿ ಯಾರೂ ವಾಸಿಸುತ್ತಿರಲಿಲ್ಲ. ಗುರು ಒಬ್ಬ ಶಿಷ್ಯನನ್ನು ಅದರ ಪರಿಸ್ಥಿತಿಯನ್ನು ನೋಡಿಕೊಂಡು ಬರಲು ಕಳುಹಿಸಿದನು. ಅವನು ಬಂದು ಹೇಳಿದ: ''ಅಯಪ್ಪ, ಅಸಹ್ಯ. ರೂಮೆಲ್ಲ ಕೊಳೆ, ರೂಮೆಲ್ಲ ಬಲೆ'' ಎಂದು ಮುಖ ಸಿಂಡರಿಸಿದ. ಗುರು ಇನ್ನೊಬ್ಬ ಶಿಷ್ಯನನ್ನು ಕಳಿಸಿದ. ಅವನು ಬಂದು ವರದಿ ಒಪ್ಪಿಸಿದ: ''ಆಹ, ಅಲ್ಲಿ ಜೇಡರ ಹುಳಗಳು ಎಷ್ಟು ಸುಂದರವಾಗಿ ಬಲೆ ಕಟ್ಟಿವೆ!'' ಎಂದು ಸಂತೋಷ ವ್ಯಕ್ತ ಪಡಿಸಿದ. ಎಲ್ಲವನ್ನೂ ಸಕಾರಾತ್ಮಕವಾಗಿ ನೋಡುವುದರಿಂದ ಮನಸ್ಸು ಶಾಂತವಾಗಿರುತ್ತದೆ. ಅತ್ಯಂತ ದುಷ್ಟ ವ್ಯಕ್ತಿಯಲ್ಲಿಯೂ ಇರಬಹುದಾದ ಛಲ, ಶಕ್ತಿ, ಧೈರ್ಯ, ಸಾಹಸ ಇತ್ಯಾದಿಗಳನ್ನು ನಾವು ಗುರುತಿಸಬಹುದು. ಕಷ್ಟಕಾರ್ಪಣ್ಯಗಳು ಕಾರ್ಮೋಡದ ಮಧ್ಯೆಯೂ ಆಶಾಕಿರಣಗಳನ್ನು ಗುರುತಿಸ ಬಹುದು.


ಮಾಧ್ಯಮವು ಕೇವಲ ಕೆಟ್ಟದ್ದನ್ನೇ ಬಿಂಬಿಸುತ್ತದೆ ಎಂದು ನಾವು ದೂಷಿಸುತ್ತೇವೆ. ಕೆಟ್ಟದ್ದು ಸುದ್ದಿಯಾಗುತ್ತಿದೆ ಎಂದರೆ ಸಮಾಜವು ಒಳ್ಳೆಯದಾಗಿದೆ ಎಂದರ್ಥ. ಸಮಾಜವು ಸಂಪೂರ್ಣ ಕೆಟ್ಟುಹೋಗಿದ್ದರೆ ಕೆಟ್ಟದ್ದು ಸುದ್ದಿಯಾಗುತ್ತಿರಲಿಲ್ಲ, ಒಳ್ಳೆಯದು ಸುದ್ದಿಯಾಗುತ್ತಿತ್ತು. ಅತ್ಯಂತ ಸುಳ್ಳು ಹೇಳುವ ವ್ಯಕ್ತಿಯು ಆಡಿದ ಮಾತೆಲ್ಲವೂ ಸುಳ್ಳಾಗಿರುವುದಿಲ್ಲ.

ನಿಷೇಧಾತ್ಮಕ ಭಾವಕ್ಕೆ ಸಂಬಂಧಿಸಿದಂತೆ ಒಂದು ಸ್ವಾರಸ್ಯಕರ ಕಥೆಯಿದೆ. ಒಬ್ಬ ಬೇಟೆಗಾರನಿದ್ದ. ಅವನು ಒಂದು ದಿನ ಬೇಟೆ ಗಾಗಿ ಕಾಡಿಗೆ ಹೋಗಿದ್ದಾಗ ಒಂದು ವಿಚಿತ್ರ ಪ್ರಾಣಿಯನ್ನು ಕಂಡನು. ಅದು ಒಂದು ಬಗೆಯ ಕಾಡುನಾಯಿ. ಅದು ನೀರಿನ ಮೇಲೆ ನಡೆದುಕೊಂಡು ಹೋಗುತ್ತಿತ್ತು. ನೀರಿನ ಮೇಲೆ ನಡೆ ಯುವ ಪ್ರಾಣಿಯನ್ನು ಅವನೆಂದೂ ಕಂಡಿರಲಿಲ್ಲ. ಅದನ್ನು ಊರಿನ ಜನರಿಗೆ ತೋರಿಸಬೇಕೆಂದು ಒಂದು ನಾಯಿಯನ್ನು ಕಷ್ಟಪಟ್ಟು ಹಿಡಿದು ಮನೆಗೆ ತೆಗೆದುಕೊಂಡು ಹೋದನು. ಊರಿನಲ್ಲಿ ಒಂದು ದೊಡ್ಡ ಕೊಳ ಇತ್ತು. ಊರಿನವರನ್ನೆಲ್ಲ ಒಬರ ಮಾಡಿಕೊಂಡನು. ಆ ನಾಯಿಯನ್ನು ಕೊಳಕ್ಕೆ ತಳ್ಳಿದನು. ನಾಯಿ ಸರಾಗವಾಗಿ ನೀರಿನ ಮೇಲೆ ನಡೆದುಕೊಂಡು ಹೋಯಿತು. ಸುತ್ತ ನೆರೆದಿದ್ದ ಜನರು ಆ ಅದ್ಭುತ ದೃಶ್ಯವನ್ನು ನೋಡಿಯೂ ಯಾವುದೇ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ. ಬೇಡನು ಎರಡು ಮೂರು ಸಾರಿ ಆ ನಾಯಿಯು ನೀರಿನ ಮೇಲೆ ನಡೆಯುವಂತೆ ಮಾಡಿದನು. ಜನರು ಸುಮ್ಮನೆ ನಿಂತುಕೊಂಡಿದ್ದರು. ''ನೀವೊಂದು ಅದ್ಭುತವಾದುದನ್ನು ಕಾಣುತ್ತಿಲ್ಲವೆ?'' ಎಂದು ಅವನು ಜನ ರನ್ನು ಕೇಳಿದಾಗ ಅವರೆಂದರು, ''ಇದೆಂಥ ನಾಯಿ! ಇದಕ್ಕೆ ಈಜುವುದಕ್ಕೂ ಬರುವುದಿಲ್ಲ''.

### ವಿಶಾಲ ಮನೋಭಾವ

ಶರಣಾಗತ ಭಕ್ತನು ತನ್ನ ವ್ಯಕ್ತಿ ಭಾವವನ್ನು ಕಳೆದುಕೊಳ್ಳುವು ದರ ಮೂಲಕ ಇಡೀ ವಿಶ್ವದೊಡನೆ ಒಂದಾಗುತ್ತಾನೆ- ವಸುಧೈವ ಕುಟುಂಬಕನಾಗುತ್ತಾನೆ. ತನ್ನ ಜೈವಿಕ ಅಸ್ತಿತ್ವವನ್ನು ಅಹಂಪರಿ ಮಿತ ವ್ಯಕ್ತಿತ್ವವನ್ನು ಮೀರಿ ಅವನು ಬೆಳೆದಿರುತ್ತಾನೆ. ಅವನು ಮಾಡುವುದು ಚಿಂತಿಸುವುದೆಲ್ಲವೂ ಭಗವಂತನಿಗಾಗಿ ಹಾಗೂ ಇತರರ ಹಿತಕ್ಕಾಗಿ. ಒಂದು ದೀಪವನ್ನು ಮರದ ಪೆಟ್ಟಿಗೆಯಲ್ಲಿಟ್ಟರೆ ಅದರ ಬೆಳಕು ಪೆಟ್ಟಿಗೆಯೊಳಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಅದೇ ದೀಪವನ್ನು ಗಾಜಿನ ಪೆಟ್ಟಿಗೆಯಲ್ಲಿಟ್ಟರೆ ಅದರ ಬೆಳಕು ಸುತ್ತಲೂ ವಿಸ್ತಾರವಾಗಿ ಹರಡುತ್ತದೆ. ಹಾಗೆಯೇ ವ್ಯಕ್ತಿ(ಅಹಂ) ಭಾವವನ್ನು ಕಳೆದು ಭಗವದ್ಭಾವದಿಂದ ಕೂಡಿದಾಗ ವ್ಯಕ್ತಿಯ ಪ್ರಜ್ಞೆಯ ವಿಸ್ತಾರವಾಗಿ ಹರಡುತ್ತದೆ, ವಿಶಾಲವಾಗುತ್ತದೆ. ಇಲ್ಲ ದಿದ್ದರೆ ಅದು ವ್ಯಕ್ತಿತ್ವದೊಳಗೇ ಹುದುಗಿಕೊಂಡಿರುತ್ತದೆ. ಒಂದು ಮಂಜುಗಡ್ಡೆಗೆ ಸೀಮಿತವಾದ ಅಸ್ತಿತ್ವವಿರುತ್ತದೆ. ಅದೇ ನೀರಾ ದಾಗ ವಿಸ್ತಾರವಾಗಿ ಹರಡಿಕೊಳ್ಳುತ್ತದೆ. ಮತ್ತು ಅದು ಆವಿ ಯಾದಾಗ ಇನ್ನು ವಿಸ್ತಾರವಾಗಿ ಮೇಲೇರುತ್ತದೆ. ತನ್ನ ವ್ಯಕ್ತಿತ್ವಕ್ಕೆ ಮಾತ್ರ ಸೀಮಿತವಾದ, ಅಹಂಕೇಂದ್ರಿತವಾದ ವ್ಯಕ್ತಿಯು ಮಂಜು ಗಡ್ಡೆಯಂತೆ. ಮಂಜುಗಡ್ಡೆಯನ್ನು ಒಡೆದರೆ ಅದು ಚೂರು ಚೂರಾಗುವಂತೆ, ಅನೇಕ ವಿರುದ್ಧ ಸನ್ನಿವೇಶಗಳ ಹೊಡೆತದಿಂದ ಅವನ ವ್ಯಕ್ತಿತ್ವದಲ್ಲಿ ಬಿರುಕುಗಳು ಉಟಾಗುತ್ತವೆ, ಸ್ಥಿರತೆಯನ್ನು ಕಳೆದುಕೊಳ್ಳುತ್ತಾನೆ. ಅವನಲ್ಲಿ ಪ್ರೀತಿಯ ಬಿಸಿ (Warmth of love) ಇರುವುದಿಲ್ಲ, ತಣ್ಣಗಿರುತ್ತಾನೆ(Cold). ಭಗವದ್ಭಾವದ ಬಿಸಿ ತಗಲಿದಾಗ ಅವನು ನೀರಿನಂತೆ ವಿಸ್ತಾರಗೊಳ್ಳುತ್ತಾನೆ. ಅಂದರೆ ಸಾಮಾಜಿಕ ವಿಸ್ತರಣೆಯನ್ನು ಪಡೆಯುತ್ತಾನೆ. ಮುಂದೆ ಶರಣಾಗತಿಯ ಭಾವದಿಂದ ಅಹಂಭಾವವನ್ನು ಕಳೆದುಕೊಂಡು ಮೇಲೇರುತ್ತಾನೆ. ಆಗ ಅವನ ವ್ಯಕ್ತಿತ್ವ ವಿಶ್ವವಿಶಾಲವಾಗುತ್ತದೆ.

ವಿಶಾಲಮನೋಭಾವಕ್ಕೆ ಉದಾಹರಣೆಯಾಗಿ ಸ್ವಾಮಿ ವಿವೇಕಾ ನಂದರು ಒಂದು ಕಥೆಯನ್ನು ಹೇಳುತ್ತಾರೆ. ಒಂದು ಎತ್ತು ಮಲಗಿಕೊಂಡು ವಿಶ್ರಾಂತಿಯನ್ನು ಪಡೆಯುತ್ತಿತ್ತು. ಶಾಂತ



ನಿರ್ಲಿಪ್ತ ಭಾವವು ಅದರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅದಕ್ಕೆ ದೊಡ್ಡದಾದ ಕೊಂಬು. ಒಂದು ನೊಣ ಆ ಕೊಂಬಿನ ಮೇಲೆ ಕುಳಿತು ನಿದ್ರಿಸುತ್ತಿತ್ತು. ಅದಕ್ಕೆ ಎಚ್ಚರವಾದಾಗ ತಾನೆಲ್ಲಿರುವೆನೆಂಬುದರ ಅರಿವಾಯಿತು. ಅದಕ್ಕೂ ಸ್ವಲ್ಪ ಉದಾರ ಬುದ್ಧಿಯಿತ್ತು(ಹೊಲಸು ತಿಂದೂ). ತನ್ನಿಂದ ಇತರರಿಗೆ ತೊಂದರೆಯಾಗಬಾರದೆಂಬ ಕಳಕಳಿ ಅದಕ್ಕಿತ್ತು. ಅದು ಎತ್ತನ್ನು ಉದ್ದೇಶಿಸಿ ಹೇಳಿತು: ''ಎತ್ತುರಾಯ! ನಾನು ನಿನ್ನ ಕೊಂಬಿನ ಮೇಲೆ ಕುಳಿತುಕೊಂಡಿರುವುದರಿಂದ ನಿನಗೆ ತೊಂದರೆಯಾಗುತ್ತದೆಯೆ? ನಾನು ಹೊರಟುಹೋಗಲೆ?'' ''ಬೇಡ. ನನಗೇನೂ ತೊಂದರೆಯಿಲ್ಲ. ನೀನು ಮಾತ್ರವಲ್ಲ, ನಿನ್ನ ಕುಟುಂಬ ಸಮೇತನಾಗಿ ಬಂದು ಇಲ್ಲಿ ನೆಲೆಸಿದರೂ ನನಗೇನೂ ತೊಂದರೆಯಿಲ್ಲ'' ಎಂದು ಎತ್ತು ಗಂಭೀರವಾಗಿ ನುಡಿಯಿತು. ಈ ರೀತಿ ಎಲ್ಲರನ್ನೂ ಸ್ವೀಕರಿಸುವ, ಎಲ್ಲರನ್ನೂ ತನ್ನ ಪ್ರಜ್ಞಾಪರಿಧಿಯ ಒಳಗೆ ಸೇರಿಸಿಕೊಳ್ಳುವ ವಿಶಾಲ ಮನೋಭಾವ ಶರಣಾಗತನಲ್ಲಿರುತ್ತದೆ. ತನ್ನ ವ್ಯಕ್ತಿತ್ವದ ಪರಿಧಿಗಷ್ಟೇ ಅದು ಸೀಮಿತವಾಗಿರುವುದಿಲ್ಲ.

ಶುಕದೇವನು ಜನಕರಾಜನ ಬಳಿಗೆ ಶಿಷ್ಯನಾಗಿ ಹೋಗುತ್ತಾನೆ. ಜನಕನು ಅವನನ್ನು ಅನೇಕ ಪರೀಕ್ಷೆಗೆ ಒಳಪಡಿಸಿ, ಅವನ ನಿರ್ವಿಕಾರ ಸ್ಥಿತಿಯನ್ನು ಅರ್ಥಮಾಡಿಕೊಂಡು, ಅವನಾಗಲೇ ಜ್ಞಾನಿಯಾಗಿರುವನೆಂದೂ, ತಾನೇನೂ ಬೋಧಿಸುವ ಅಗತ್ಯವಿಲ್ಲವೆಂದೂ ಅವನಿಗೆ ತಿಳಿಸುತ್ತಾನೆ. ಆದರೂ ಶುಕನು ಗುರುದಕ್ಷಿಣೆಯನ್ನು ನೀಡಬೇಕೆಂದು ಬಯಸಿ, ತಾನೇನು ನೀಡಬೇಕೆಂದು ಜನಕನನ್ನು ಕೇಳುತ್ತಾನೆ. ಜನಕನು ರಾಜನಾಗಿದ್ದುದರಿಂದ ಅವನಿಗೆ ಬೇಕಾದುದು ಯಾವ ವಸ್ತುವೂ ಇರಲಿಲ್ಲ. ಆದ್ದರಿಂದ ಅತ್ಯಂತ ಅನುಪಯುಕ್ತ ವಸ್ತುವನ್ನು ಗುರುದಕ್ಷಿಣೆಯಾಗಿ ನೀಡಲು ಶುಕನಿಗೆ ಹೇಳಿದನು. ಅಂತಹ ವಸ್ತುವನ್ನು ತೆಗೆದುಕೊಂಡು ಬರಲು ಶುಕನು ಅರಮನೆಯಿಂದ ಹೊರಗೆ ಬಂದನು. ಸಾಮಾನ್ಯ ಮಣ್ಣು ಯಾವ ಕೆಲಸಕ್ಕೂ ಬಾರದು ಎಂದು ಅವನು ಅದನ್ನು ಎತ್ತಿಕೊಳ್ಳಲು ಹೋದನು. ಅದರಿಂದ ಒಂದು ಧ್ವನಿ ಕೇಳಿಸಿತು: ''ನಾನು ಅನುಪಯುಕ್ತ ವಸ್ತುವೆಂದು ಭಾವಿಸಿದೆಯಾ? ನನ್ನಿಂದ ಇಟ್ಟಿಗೆ, ಮಡಕೆ, ಕುಡಿಕೆ ಮುಂತಾದ ಅನೇಕ ವಸ್ತುಗಳು ತಯಾರಾಗುತ್ತವೆ.'' ಕಲ್ಲಿನಿಂದ ಏನೂ ಪ್ರಯೋಜನವಿಲ್ಲವೆಂದು ಅದನ್ನು ಎತ್ತಿಕೊಳ್ಳಲು ಹೋದರೆ ಅದು ಹೇಳಿತು: ''ನನ್ನಿಂದ ಮನೆ ಕಟ್ಟಲಾಗುತ್ತದೆ. ದುಷ್ಟರು ಕಲ್ಲೆಸೆಯುವುದಕ್ಕೆ ನನ್ನನ್ನೇ ಉಪಯೋಗಿಸುವುದು.'' ಮಲವು ಅತ್ಯಂತ ತಿರಸ್ಕಾರಾರ್ಹವಾದುದು, ಕೆಲಸಕ್ಕೆ ಬಾರದ ವಸ್ತು ಎಂದು ತೆಗೆದುಕೊಳ್ಳಲು ಹೋದರೆ ಅದು ಹೇಳಿತು: ''ನನ್ನಿಂದ ಗೊಬ್ಬರವಾಗುತ್ತದೆ, ಸಸ್ಯವರ್ಗಕ್ಕೆ ನನ್ನಿಂದ ಮಹದುಪಕಾರವಾಗುತ್ತದೆ. ನನಗೆ ಈ ದುಃಸ್ಥಿತಿ ಬಂದಿರುವುದು ಸಂಗದೋಷದಿಂದ, ಮನುಷ್ಯನ ಸಂಪರ್ಕದಿಂದ. ಇದಕ್ಕೂ ಮೊದಲು ನಾನು ಬಂಗಾರದ ತಟ್ಟೆಯಲ್ಲಿ ಶೋಭಿಸುತ್ತಿದ್ದೆ.'' ಈಗ ಶುಕದೇವನಿಗೆ ಈ ಪ್ರಪಂಚದಲ್ಲಿ ಅನುಪಯುಕ್ತ ವಸ್ತು ಯಾವುದೂ ಇಲ್ಲ; ನಿಜವಾಗಿಯೂ ಅನುಪಯುಕ್ತವಾದ ವಸ್ತುವೊಂದು ಇರುವುದಾದರೆ ಅದೇ ಅಹಂಕಾರ, ಎಂಬ ಅರಿವಾಯಿತು. ಅಹಂಕಾರವನ್ನೇ ಗುರುದಕ್ಷಿಣೆಯಾಗಿ ನೀಡುವುದೆಂದು ಅವನು ತೀರ್ಮಾನಿಸಿದನು. ಈ ರೀತಿ ನಮ್ಮ ಅಹಂಕಾರವನ್ನು ಭಗವಂತನಿಗೆ ಅರ್ಪಿಸುವುದೇ ಶರಣಾಗತಿ. ❋

## ಗೃಹಸ್ಥ ಧರ್ಮ

(ಸ್ವಾಮಿ ಅದ್ಭುತಾನಂದರೊಡನೆ ಸಂಭಾಷಣೆ)

ಭಕ್ತ : ಮಹಾರಾಜ್! ನೀವು ಎಲ್ಲರಿಗೂ ಸ್ತ್ರೀಸಂಗವನ್ನು ನಿಷೇಧಿಸುತ್ತೀರಿ. ಆದರೆ ನಮ್ಮಂತಹ ಗೃಹಸ್ಥರ ಉಪಾಯವೇನು? ಸ್ತ್ರೀಯರಿಲ್ಲದೆ ಸಂಸಾರ ನಡೆಯುವುದಿಲ್ಲ.

ಸ್ವಾಮಿ ಅದ್ಭುತಾನಂದ : ಸಂಸಾರಿಯ ಧರ್ಮ ಮತ್ತು ಸಂನ್ಯಾಸಿಯ ಧರ್ಮ ಒಂದೇ ಏನು? ಸಂಸಾರಿಗಳು ಸ್ತ್ರೀಸಂಗವನ್ನು ಮಾಡಿದರೆ ದೋಷವಿಲ್ಲ. ಆದರೆ ಸಂನ್ಯಾಸಿಯ ನಿಯಮ ಕಠಿಣ. ಅವರು ಹೇಳುತ್ತಿದ್ದರು, 'ಸಂನ್ಯಾಸಿಗೆ ಕಾಮಿನಿಕಾಂಚನ ಯಾವ ರೀತಿಯದೆಂದರೆ, ಸುಂದರಿಗೆ ದುರ್ಗಂಧವಿದ್ದಂತೆ. ದುರ್ಗಂಧವಿದ್ದರೆ ಸೌಂದರ್ಯವು ವ್ಯರ್ಥ.' ಸಂನ್ಯಾಸಿಗೆ ಮಹಿಳೆಯರು ಕಾಲಸರ್ಪವಿದ್ದಂತೆ. ಅವರ ಬಲೆಗೆ ಬಿದ್ದು ಅನೇಕ ಸಂನ್ಯಾಸಿಗಳ ಪತನವಾಗಿದೆ.

ಭಕ್ತ : ನಮಗೆ ಉದ್ಧಾರದ ಆಸೆಯೇ ಇಲ್ಲವೆ? ನಾವು ಸಂಪೂರ್ಣ ಪತಿತರೆ?

ಸ್ವಾಮಿ ಅದ್ಭುತಾನಂದ :ಹಾಗೇಕೆ? ನೀವು ಗೃಹಸ್ಥರು. ಗೃಹಸ್ಥ ಧರ್ಮವನ್ನು ನಡೆಸಿಕೊಂಡು ಹೋಗಿ, ಅದರಿಂದಲೇ ನಮಗೆ ಕಲ್ಯಾಣವಾಗುವುದು. ವಿದ್ಯಾಸಂಸಾರವನ್ನು ಮಾಡಿ. ಅದರಿಂದ ಸ್ತ್ರೀಯರೊಡನಿದ್ದೂ ನಿಮಗೆ ಭಗವಂತ ದೊರಕುವನು.

*('ಅದ್ಭುತವಾಣಿ' ಗ್ರಂಥದಿಂದ)*